ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/07/ಎಲ್ಆರ್‌ಡಿಸಿ/2017-18 / 1870

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 07-10-2017

## -:ಸುತ್ತೋಲೆ:-

**ವಿಷಯ:-** 2018-19 ನೇ ಸಾಲಿನ ರಾಜ್ಯ ಮಟ್ಟದ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನವನ್ನು ಆಯೋಜಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರದ ಸಂಖ್ಯೆ: ಇಡಿ/096/ಟಿಪಿಇ/2016, ದಿ:08-12-2016.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ/07/ಎಲ್ಆರ್‌ಡಿಸಿ/2017-18, ದಿನಾಂಕ:03.10.2017.

****

ವಿಧ್ಯಾರ್ಥಿಗಳಲ್ಲಿ ಅಡಗಿರುವ ಕ್ರಿಯಾತ್ಮಕ ಪ್ರತಿಭೆಯನ್ನು ಹೊರತರುವ ಉದ್ದೇಶದಿಂದ ಪ್ರತಿ ವರ್ಷವೂ ರಾಜ್ಯ ಮಟ್ಟದ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನವನ್ನು ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ / ಪಾಲಿಟೆಕ್ನಿಕ್‌ಗಳಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದ್ದು, 2017-18 ನೇ ಸಾಲಿನ ರಾಜ್ಯ ಮಟ್ಟದ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನವನ್ನು 2018 ರ ಪೆಬ್ರವರಿ ನಾಲ್ಕನೆ ಅಥವಾ ಮಾರ್ಚ್ ತಿಂಗಳ ಮೊದಲನೆಯ ವಾರದಲ್ಲಿ ಚಿಕ್ಕಬಳ್ಳಾಪುರದ ಬಿ.ಜಿ.ಎಸ್ ಪಾಲಿಟೆಕ್ನಿಕ್‌ನಲ್ಲಿ ಆಯೋಜಿಸಲಾಗುವುದು.

ರಾಜ್ಯ ಮಟ್ಟದ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನದಲ್ಲಿ 300 ರಿಂದ 350 ಪ್ರೊಜೆಕ್ಟ್‌ಗಳೊಂದಿಗೆ ಸುಮಾರು 600 ರಿಂದ 700 ವಿದ್ಯಾರ್ಥಿಗಳು, 80 ರಿಂದ 100 ಉಪನ್ಯಾಸಕರು/ಸಿಬ್ಬಂದಿ ವರ್ಗದವರು ಭಾಗವಹಿಸುವ ಸಂಭವವಿದ್ದು, ಸದರಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರಿಗೆ ಎರಡು ದಿನಗಳಂದು ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲು ಹಾಗೂ ತಾಂತ್ರಿಕ ವಸ್ತು ಪ್ರದರ್ಶನವನ್ನು ಆಯೋಜಿಸಲು ತಗಲುವ ಇತರೆ ವೆಚ್ಚಗಳನ್ನು ಭರಿಸಲು ಸರ್ಕಾರದ ವತಿಯಿಂದ 10 ಲಕ್ಷ ರೂಪಾಯಿಗಳ (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ನೀಡಲಾಗುವುದು. ಮೇಲ್ಕಂಡ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಶಕ್ತವಾಗಿರುವ ಹಾಗೂ **2018-19 ನೇ ಸಾಲಿನ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನವನ್ನು ಆಯೋಜಿಸಲು ಇಚ್ಚಿಸುವ ಸಂಸ್ಥೆಯ ಪ್ರಾಚಾರ್ಯರು ತಮ್ಮ ಸಮ್ಮತಿಯನ್ನು ದಿನಾಂಕ:30-10-2017** ರೊಳಗಾಗಿ ಈ ಕಛೇರಿಗೆ ತಿಳಿಸಲು ಈ ಮೂಲಕ ಸೂಚಿಸಲಾಗಿದೆ. ಪ್ರಾಚಾರ್ಯರುಗಳ ಪ್ರಸ್ತಾವನೆಯನ್ನು ರಾಜ್ಯ ಮಟ್ಟದ ಸಮಿತಿಯು ಪರಿಸಿಲಿಸಿದ ನಂತರ 2018-19 ನೇ ಸಾಲಿನ ರಾಜ್ಯ ಮಟ್ಟದ "ನೀವೇ ಮಾಡಿ ನೋಡಿ" ತಾಂತ್ರಿಕ ವಸ್ತು ಪ್ರದರ್ಶನವನ್ನು ಆಯೋಜಿಸುವ ಸಂಸ್ಥೆಯ ವಿವರವನ್ನು 2017-18 ನೇ ಸಾಲಿನ ತಾಂತ್ರಿಕ ವಸ್ತು ಪ್ರದರ್ಶನದ ಸಮಾರಂಭದ ಸಮಯದಲ್ಲಿ ಘೋಷಿಸಲಾಗುವುದು.

07/10/17

ಜಂಟಿ ನಿರ್ದೇಶಕರು (ಸಿಡಿಸಿ)

7/10/17

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಮತ್ತು ಇಂಜಿನೀಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.